ಒ.ಎಸ್.ನಂ:186/2019
ಡಿ.ಡಬ್ಲೂ.5

**ದಿ:06.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-**ವಾದಿ ಪರ ಶ್ರೀ. **B.E.R.,** ವಕೀಲರಿಂದ:-

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಮಾಹಿತಿಯನ್ನು ಯಾರು ನೀಡಿರುತ್ತಾರೆ ಎಂದರೆ ಸಾಕ್ಷಿ ನಾನು ಬಾಬಣ್ಣ ಅವರಿಂದ ಆಸ್ತಿ ಖರೀದಿ ಮಾಡಿರುತ್ತೇನೆ ಎಂದು ಹೇಳುತ್ತಾರೆ . ನನಗೆ ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದ ಎರಡನೇ ಪ್ಯಾರದ ವಿಷಯವನ್ನು ನಾನು ಹೇಳಿ ಬರೆಸಿರುವುದಿಲ್ಲ . ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಹಾಗೆ ಈ ದಾವೆಯ ವಿಭಾಗ ಕೋರಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದ ಎಲ್ಲಾ ಮಾಹಿತಿಯು ಸರ್ವೆ ನಂಬರ್ 91/1 ಜಮೀನಿಗ ಸಂಬಂದ ಪಟ್ಟಿದೇ ಹೋರತು ದಾವಾ ಆಸ್ತಿ ಸರ್ವೆ ನಂಬರ್ 91/9 ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 3 ರವರು ಈ ದಾವೆಯಲ್ಲಿ ಏನು ದಾಖಲೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನಾನು ಕರಿಯಪ್ಪ ಅವರಿಗೆ ಮಾರಾಟ ಮಾಡಿರುತ್ತೇನೆ ಎಂದು ಹೇಳುತ್ತಾರೆ . ಪ್ರತಿವಾದಿ 2 ಕರಿಯಪ್ಪ ಅವರು ನನ್ನ ಸಂಬಂಧಿಕರು ಇರುತ್ತಾರೆ . ನಿಡಿ 28 ಕ್ರಯಪತ್ರದಲ್ಲಿ ಪುಟ 2 ರಲ್ಲಿ ನಮೂದು ಇರುವ MRT 157/2014-15 ರ ಅದೇಶವನ್ನು ನಾನು ಕರಿಯಪ್ಪ ಅವರಿಗೆ ನೀಡಿರುತ್ತೇನೆ . ದ್ಯಾಮಪ್ಪ ತಂದೆ ಚಿನ್ನವಾಡಪ್ಪ ಅವರು ತಮ್ಮ ಜೀವಿತಕಾಲದಲ್ಲಿ ಎಂದಿಗೂ ಸರ್ವೆ ನಂಬರ್ 91/9 ಅನ್ನು ಮಾರಾಟ ಮಾಡಿರುವುದಿಲ್ಲ . ನಾನು ಕಂದಾಯ ಅಧಿಕಾರಿಗಳ ಜೋತೆ ಶಾಮೀಲು ಆಗಿ ಸದರಿ MRT 157/2014-15 ಆದೇಶವನ್ನು ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಪ್ಯಾರ ನಂಬರ್ 4 ರಲ್ಲಿ ಸರ್ವೆ ನಂಬರ್ 91/1 ಪಿ1 ಜಮೀನು ಸರ್ವೆ ನಂಬರ್ 91/9 ಎಂದು ಬದಲಾವಣೆ ಆಗಿದ ಬಗ್ಗೆ ಕಂದಾಯ ಇಲಾಖೆ ಆದೇಶ ನಮ್ಮ ಬಳಿ ಇರುತ್ತದೆ . ದಾವಾ ಆಸ್ತಿಯು ಎಂದಿಗೂ ಸರ್ವೆ ನಂಬರ್ 91/1 ಪಿ ಯಿಂದ 91/9 ಎಂದು ಬದಲಾವಣೆ ಆಗಿರುವುದಿಲ್ಲ . ಸನ್ 1990 ರಂದು ವಾದಿಗಳ ತಂದೆಗೆ ಪಾಲುವಿಭಾಗ ಆದ ಕಾಲದಿಂದ ದಾವಾ ಆಸ್ತಿಯು ಸರ್ವೆ ನಂಬರ್ 91/9 ಹಾಗೇ ಇರುತ್ತದೆ ಎಂದರೆ ಸರಿ.

ಒ.ಎಸ್.ನಂಃ186/2019
ಡಿ.ಡಬ್ಲೂ.5

ಸದರಿ ಜಮೀನು ಬದಲಾವಣೆ ಆದ ಬಗ್ಗೆ ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ . ದಾವಾ ಆಸ್ತಿಯನ್ನು ವಾದಿಗಳ ತಂದೆ ನನಗೆ ಬೊಗ್ಯಕ್ಕೆ ನೀಡಿದ್ದು , ನಾನು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ MRT 157/2014-15 ಅನ್ನು ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ . ದಾವಾ ಆಸ್ತಿಯು ವಾದಿಗಳಿಗೆ ಸೇರಿದ್ದು ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದ 7 ನೇ ಪುಟದಲ್ಲಿ ನಮೂದಿಸಿರುವ ಹಾಗೆ ವಾದಿಗಳು ದಾಖಲೆಗಳನ್ನು ಸೃಷ್ಠಿ ಮಾಡಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿ 2 ರವರು ಸೇರಿಕೊಂಡು ಸುಳ್ಳು ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಗಳಿಗೆ ಪರಿಹಾರ ನೀಡಬೇಕಾಗುತ್ತದೆ ಎಂದು ಪ್ರತಿವಾದಿ 3 ರವರ ಪರವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ವಾದಿಗಳೇ ಅಸಲು ಮಾಲೀಕರು ಇರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-
ಸಿವಿಲ್ ನ್ಯಾಯಾಧೀಶರು, ಜಗಳೂರು